ರಾಣೆಬೆನ್ನೂರು ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿಯೆನ್ನು ವಿಭಜಿಸುವ ಬಗ್ಗೆ

೧೬೮೮. ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹಾಯಕ ಶಿಕ್ಷಣಾಧಿಕಾರಿಗಳ ಕಛೇಗಿ, ರಾಣೆಬೆನ್ನೂರನ್ನು ವಿಭಜಿಸಲು ಯಾವುದಾದರೂ ರಾಣೆಬೆನ್ನೂರು ತಾಲ್ಲೂಕಿನಿಂದ ಅರ್ಜಿ ಬಂದಿದೆಯೇ ?

ಆ) ಹಾಗಾದರೆ ಸರ್ಕಾರ ಇದರ ಬಗ್ಗೆ ತೆಗೆದುಕೊಂಡ ನಿರ್ಣಯವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು

ಆ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವ ಕಾರಣ ಸರ್ಕಾರವು ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವುದಿಲ್ಲವೆಂದು ಕೇಂದ್ರ ಸರ್ಕಾರ ತೆಗೆದುಕೊಂಡಿರುವುದರಿಂದ ಈಗ ಸಧ್ಯಕ್ಕೆ ರೇಂಜಿನ ವಿಭಜನೆ ಮಾಡಲಾಗುವುದಿಲ್ಲ.

ಬೆಂಗಳೂರು ಮೈಸೂರು ರೈಲಂಮಾರ್ಗ ಬ್ರಾಡ್‌ಗೇಜ್ ಬಗ್ಗೆ

೧೫೨೩. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು-ಮೈಸೂರು ರೈಲು ಮಾರ್ಗ ಬ್ರಾಡ್‌ಗೇಜಿಗೆ ಪರಿವರ್ತಿಸಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರವು ಒತ್ತಾಯ ತಂದಿದೆಯೇ ?

ಆ) ಈ ಮಾರ್ಗ ಪರಿವರ್ತನೆಗೆ ಕೇಂದ್ರ ಸರ್ಕಾರವು ವಿಧಿಸಿರುವ ಷರತ್ತುಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಸಚಿವರು).—

ಅ) ತಂದಿದೆ.

ಆ) ಷರತ್ತುಗಳನ್ನೇನೂ ವಿಧಿಸಿಲ್ಲ. ಆದರೆ ಈ ಯೋಜನೆಯು ಆರ್ಥಿಕವಾಗಿ ಲಾಭದಾಯಕವಾಗಿಲ್ಲವೆಂದು ಕಂಡು ಬಂದುದರಿಂದ ಈ ಪರಿವರ್ತನೆಯನ್ನು ಏಳನೆಯ ಯೋಜನೆಯಲ್ಲಿ ಸೇರಿಸುವುದು ಸಧ್ಯಕ್ಕೆ ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ.

ಅಧ್ಯಾಪಕರುಗಳಿಗೆ ವೇತನ ಪಾವತಿ

೧೬೬೬. ಶ್ರೀಮತಿ ಸಂಪ್ರಾವಸಂತ (ಸೇರಾಜಪೇಟೆ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅನುದಾನ ಸಂಹಿತೆಗೊಳಪಟ್ಟಿರುವ ಸಂಯುಕ್ತ ಕರಿಯ ಕಾಲೇಜುಗಳು ಮತ್ತು ಪ್ರೌಢ ಶಾಲಾ ಅಧ್ಯಾಪಕರುಗಳಿಗೆ ಪ್ರತಿ ತಿಂಗಳೂ ಅವರ ವೇತನವನ್ನು ರಾಜ್ಯ ಸರ್ಕಾರವು ಪಾವತಿ ಮಾಡುತ್ತಿದೆಯೇ ?

ಆ) ಕಳೆದ ಹಲವಾರು ತಿಂಗಳುಗಳಿಂದ ಸದರಿ ಉಪನ್ಯಾಸಕರುಗಳಿಗೆ ವೇತನ ವಿತರಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸಂಬಳ ವಿತರಣೆ ಮಾಡಲು ಇರುವ ಅಡಚಣೆಗಳೇನು? ಅವುಗಳನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?